ಓ.ಎಸ್. ನಂ. 218/2017

ಪಿ ಡಬ್ಲ್ಯೂ -1

**<u>ಸಾಕ್ಷಿಯನ್ನು ದಿನಾಂಕ: 15-09-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ವಾಟೀಸವಾಲು 9 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎ ಎಂ ಕೆ ರವರಿಂದ</u>**

**1.** ಚಿಕ್ಕಶೆಟ್ಟಪ್ಪ ನನ್ನ ತಾತ. ಸದರಿ ಚಿಕ್ಕಶೆಟ್ಟಪ್ಪನವರಿಗೆ ಬ್ಯಾಟರಂಗಯ್ಯ ಮತ್ತು ರಂಗರಾಮಾನುಜಯ್ಯ ಮಕ್ಕಳು. ಬ್ಯಾಟ ರಂಗಯ್ಯನವರಿಗೆ ಪ್ರತಿವಾದಿ 3, 4 ಮತ್ತು ಶೇಷಪ್ಪ ಎಂಬ 3 ಜನ ಮಕ್ಕಳು. ಶೇಷಪ್ಪನವರು ಈಗ ಜೀವಂತ ಇರುವುದಿಲ್ಲ ಹಾಗೂ ಅವರಿಗೆ ಹೆಂಡತಿ ಮಕ್ಕಳು ಇರುವುದಿಲ್ಲ. ನನ್ನ ತಂದೆ ರಂಗರಾಮಾನುಜಯ್ಯರವರಿಗೆ ನಾನು, ಮತ್ತು ಇತರ ವಾದಿಗಳು ಮಕ್ಕಳು. ನಮ್ಮ ಕುಟುಂಬದಲ್ಲಿ ನಾನು ವಾದಿಗಳು ಮತ್ತು ನನ್ನ ತಾಯಿ ಒಂದೇ ಮನೆಯಲ್ಲಿ ವಾಸ ಮಾಡುತ್ತಿರುತ್ತೇವೆ. 1 ನೇ ವಾದಿಗೆ ಸುಮಾರು 25 ವರ್ಷಗಳಿದ್ದು ಮದುವೆಯಾಗಿರುತ್ತದೆ. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನಿಗೆ ಸೇರಿದ 4 ಎಕರೆ 26 ಗುಂಟೆ ಆಸ್ತಿ ಮಾತ್ರ ಇತ್ತು. ನನ್ನ ತಂದೆ ಮತ್ತು ದೊಡ್ಡಪ್ಪ ವಿಭಾಗ ಮಾಡಿಕೊಂಡಿರುವುದಿಲ್ಲ. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನವರು ಅವರ ಒಟ್ಟು ಕುಟುಂಬದ ಯಜಮಾನಿಕೆಯನ್ನು ನೋಡಿಕೊಳ್ಳುತ್ತಿದ್ದರು. ನನ್ನ ತಂದೆ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಏನು ವ್ಯವಹಾರ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ನನ್ನ ತಂದೆ ಕುಟುಂಬದ ಹಾಗೂ ಜಮೀನಿನ ವ್ಯವಹಾರದ ಬಗ್ಗೆ ತಿಳಿಸಿರುತ್ತಿರಲಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ 1976 ನೇ ಸಾಲಿನಿಂದ ದಾಖಲೆಗಳನ್ನು ನಾನು ನೋಡಿರುತ್ತೇನೆ. ನನ್ನ ತಂದೆ ಮತ್ತು ದೊಡ್ಡಪ್ಪ ಏನೇ ವ್ಯವಹಾರ ಮಾಡಿದರು ಅವರ ಕುಟುಂಬದ ಒಳಿತಿಗಾಗಿ ಮಾಡುತ್ತಿದ್ದರು ಎಂದರೆ ಸರಿ.

2. ದಿನಾಂಕ 10-07-1961 ರಂದು ದಾವಾ ಆಸ್ತಿಯನ್ನು ನನ್ನ ತಂದೆ ಮತ್ತು ದೊಡ್ಡಪ್ಪ, ಕೃಷ್ಣಪ್ಪ ಎಂಬುವವರಿಗೆ ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಅಂದಿನಿಂದ ದಾವಾ ಆಸ್ತಿಯಲ್ಲಿ ಸದರಿ ಕೃಷ್ಣಪ್ಪರವರು ಸ್ವಾದೀನದಲ್ಲಿರುತ್ತಾರೆಂದರೆ ಸರಿಯಲ್ಲ, ನಾವು ಇರುತ್ತೇವೆ. ನನ್ನ ತಂದೆ ಮತ್ತು ದೊಡ್ಡಪ್ಪ ಭೂ ನ್ಯಾಯ ಮಂಡಳಿಯಲ್ಲಿ ಅದಿಬೋಗದಾರಿಕೆ ಹಕ್ಕುಗಾಗಿ ಅರ್ಜಿಯನ್ನು ಸಲ್ಲಿಸಿದ್ದು ಸದರಿ ಅರ್ಜಿ ಆಧಾರದ ಮೇಲೆ LRFCR 1665/1975-76 ರಂತೆ ಪ್ರಕರಣ ದಾಖಲಾಗಿರುತ್ತದೆಂದರೆ ನನಗೆ ಗೊತ್ತಿಲ್ಲ. ವಿಸ್ತೀರ್ಣ 3 ಎಕರೆ 8 ಗುಂಟೆ ಕೃಷ್ಣಪ್ಪ ರವರಿಗೆ ಸೇರಿದ್ದು ಎಂದು ಹಾಗೂ ಉಳಿದ 1 ಎಕರೆ 16 ಗುಂಟೆ ಜಮೀನಿನ ಅಧಿಬೋಗದಾರಿಕೆ ಹಕ್ಕನ್ನು ನನ್ನ ತಂದೆ ಮತ್ತು ದೊಡ್ಡಪ್ಪರವರಿಗೆ ಭೂ ನ್ಯಾಯ ಮಂಡಳಿಯವರು ಮಂಜೂರು ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ಆದೇಶವನ್ನು ಪ್ರಶ್ನಿಸಿ ನನ ್ನ ತಂದೆ ಮತ್ತು ದೊಡ್ಡಪ್ಪ LRF Appeal No.230/1990 ರಂತೆ ಮೇಲ್ಮನವಿಯನ್ನು ಸಲ್ಲಿಸಿದ್ದು ಸದರಿ ಮೇಲ್ಮನವಿ ವಜಾಗೊಂಡಿರುತ್ತದೆಂದರೆ ನನಗೆ ಗೊತ್ತಿಲ್ಲ.

3. ನನ್ನ ತಂದೆ ದಿನಾಂಕ 14-06-1992 ರಲ್ಲಿ ಮೃತ ಪಟ್ಟಿರುತ್ತಾರೆಂದರೆ ಸರಿ. ನನ್ನ ದೊಡ್ಡಪ್ಪ 2008 ನೇ ಸಾಲ್ಲಿನಲ್ಲಿ

ಮೃತ ಪಟ್ಟಿರುತ್ತಾರೆ. ನನ್ನ ತಂದೆ ಮತ್ತು ದೊಡ್ಡಪ್ಪ ತೀರಿಕೊಂಡ ನಂತರ ಹೆಣ್ಣುಮಕ್ಕಳ ಮದುವೆಗಳಿಗಾಗಿ ಹಾಗೂ ಕುಟುಂಬದ ಖರ್ಚುಗಳಿಗಾಗಿ ಹಣದ ಅವಶ್ಯಕತೆ ಇದ್ದ ಕಾರಣ ಪ್ರತಿವಾದಿ 1, 2, 4 ಮತ್ತು ಬೋಜರಾಜು ಮತ್ತು ಶೇಷಪ್ಪರವರ ಪರವಾಗಿ 1ನೇ ಪ್ರತಿವಾದಿ ದಾವಾ ಆಸ್ತಿಯನ್ನು 6 ರಿಂದ 8 ನೇ ಪ್ರತಿವಾದಿಗಳ ತಂದೆಯಾದ ಪುಟ್ಟಲಕ್ಷ್ಮಯ್ಯ ರವರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿ 1, 2, 4 ರವರಿಗೆ ನನ್ನ ತಂದೆ ಮತ್ತು ದೊಡ್ಡಪ್ಪ ತೀರಿಕೊಂಡ ನಂತರ 1 ಎಕರೆ 16 ಗುಂಟೆಯನ್ನು ಮಾತ್ರ ಅವರಿಗೆ ಹಕ್ಕು ಇದ್ದು ಆದರೆ ಕೃಷ್ಣಪ್ಪ ರವರಗೆ ಸೇರಿದ 3 ಎಕರೆ 8 ಗುಂಟೆಯನ್ನು ಸೇರಿಸಿ ಪುಟ್ಟ ಲಕ್ಷ್ಮಯ್ಯರವರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಪುಟ್ಟಲಕ್ಷ್ಮಯ್ಯ ರವರ ಹೆಸರಿಗೆ 1 ಎಕರೆ 16 ಗುಂಟೆ ಸಂಬಂಧಿಸಿದಂತೆ ಮಾತ್ರ ಪಹಣಿ ಬಂದಿರುತ್ತದೆಂದರೆ ಸರಿಯಲ್ಲ. ಕ್ರಯ ಪತ್ರದ ಅದಾರದ ಮೇಲೆ ಪುಟಲಕ್ಷ್ಮಯ್ಯರವರ ಹೆಸರಿಗೆ ಎಂ ಆರ್. ಸಂಖ್ಯೆ 7/1992-93 ರಂತೆ ಖಾತೆ ಆಗಿರುತ್ತದೆಂದರೆ ಸರಿಯಲ್ಲ. ಆ ಬಗ್ಗೆ ತಹಶೀಲ್ದಾರರು ಅದೇಶ ಮಾಡಿರುತ್ತಾರೆಂದರೆ ಗೊತ್ತಿಲ್ಲ. ಕ್ರಯ ಪತ್ರ ವಾದ ನಂತರ 1 ಎಕರೆ 16 ಗುಂಟೆಯಲ್ಲಿ ಪುಟ್ಟಲಕ್ಷ್ಮಯ ಮತ್ತು 3 ಎಕರೆ 8 ಗುಂಟೆಯ ಜಮೀನಿನಲ್ಲಿ ಕೃಷ್ಣಪ್ಪ ರವರು ಸ್ವಾದೀನದಲ್ಲಿರುತ್ತಾರೆಂದರೆ ಸರಿಯಲ್ಲ. ನಂತರ 1ನೇ ಪ್ರತಿವಾದಿ, ಪುಟ್ಟಲಕ್ಷ್ಮಯ್ಯ, 5ನೇ ಪ್ರತಿವಾದಿ ಮತ್ತು ಕೃಷ್ಣಪ್ಪ ಹೆಂಡತಿ ಶ್ರೀರಂಗಮ್ಮ ಹಾಗೂ ಅವರ ಮಕ್ಕಳು ನಟರಾಜು, ಶ್ರೀಧರ, ನನ್ನ ದೊಡ್ಡಪ್ಪ ಬ್ಯಾಟರಂಗಯ್ಯ ರವರು ಸೇರಿಕೊಂಡು ದಿನಾಂಕ 04-06-1997 ರಂದು ದಾವಾ ಆಸ್ತಿಯನ್ನು 9 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿಯ ಖಾತೆ ಪಹಣಿ 9ನೇ ಪ್ರತಿವಾದಿ ಹೆಸರಿಗೆ ಬರುತ್ತಿರುತ್ತದೆಂದರೆ ಸರಿ, ಈಗಲೂ ಬ್ಯಾಂಕಿನಲ್ಲಿ ನನ್ನ ತಂದೆ ಪಡೆದಿರುವ ಸಾಲ ತಿರುವಳಿಯಾಗಿರುವುದಿಲ್ಲ. ದಾವಾ ಆಸ್ತಿಯ ಕಂದಾಯವನ್ನು 9 ನೇ ಪ್ರತಿವಾದಿ ಪಾವತಿ ಮಾಡಿರುತ್ತಾರೆಂದರೆ ಸರಿಯಲ್ಲ. ನನ್ನ ತಂದೆ ಜೀವಿತಾವಧಿಯಲ್ಲಿ ಅವರು ಕಂದಾಯವನ್ನು ಪಾವತಿ ಮಾಡಿದ್ದು ನಾನು ಕಳೆದ ವರ್ಷ ದಾವಾ ಆಸ್ತಿಗೆ ಸಂಬಂಧಿಸಿದಂತೆ ಕಂದಾಯವನ್ನು ಪಾವತಿ ಮಾಡಿರುತ್ತೇನೆ. ದಾವಾ ಆಸ್ತಿಯಲ್ಲಿ 9ನೇ ಪ್ರತಿವಾದಿಯ ಸ್ವಾದೀನದಲ್ಲಿರುತ್ತದೆಂದರೆ ಸರಿಯಲ್ಲ, ನಾವು ಇರುತ್ತೇವೆ. ದಾವಾ ಆಸ್ತಿಯನ್ನು ಪುಟ್ಟಲಕ್ಷ್ಮಯರವರಿಗೆ ಮಾರಾಟ ಮಾಡಿದ ನಂತರ ನಮ್ಮ ಕುಟುಂಬದವರು ಯಾರು ಸದರಿ ಆಸ್ತಿಯಲ್ಲಿ ಸ್ವಾದೀನದಲ್ಲಿರಲಿಲ್ಲ ಎಂದರೆ ಸರಿಯಲ್ಲ. 9ನೇ ಪ್ರತಿವಾದಿ ಮತ್ತು ಪುಟ್ಟಲಕ್ಷ್ಮಯ್ಯ ರವರ ಹೆಸರಿಗೆ ಆದ ಕ್ರಯದ ಪತ್ರದ ಬಗ್ಗೆ ನನಗೆ ಈ ದಾವೆಯನ್ನು ಸಲ್ಲಿಸುವಾಗ ಗೊತ್ತಾಗಿರುತ್ತದೆ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ ಸ್ವಾದೀನ ಇರುವುದಿಲ್ಲ ಎಂದರೆ ಸರಿಯಲ್ಲ. ಪುಟ್ಟಲಕ್ಷ್ಮಯ್ಯ ಹಾಗೂ 9ನೇ ಪ್ರತಿವಾದಿ ಹೆಸರಿಗೆ ಇರುವ ಖಾತೆಯನ್ನು ನಾವು ಪ್ರಶ್ನೆ ಮಾಡಿರುವುದಿಲ್ಲ. ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆದ ನಂತರ 9ನೇ ಪ್ರತಿವಾದಿ ಹಣವನ್ನು ಖರ್ಚು ಮಾಡಿ ಬೋರ್ ವೆಲ್ ನ್ನು ಹಾಕಿಸಿ , ಬೆಳೆಯನ್ನು ಬೆಳೆದಿರುವ ಕಾರಣ ನಾನು ಉದ್ದೇಶಪೂರಕವಾಗಿ ಈ ದಾವೆಯನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 3 ಎಕರೆ 8 ಗುಂಟೆ

ತೋಟ ಇರುತ್ತದೆಂದರೆಸರಿ. ಉಳಿಕೆ 1 ಎಕರೆ 16 ಗುಂಟೆಯಲ್ಲಿ ಭತ್ತ ಬೆಳೆದಿದ್ದು ಬೋರ್ ವೆಲ್ ನ ವಿದ್ಯುತಚ್ಚಕ್ತಿ ಬಿಲ್ ನನ್ನ ತಂದೆ ಹೆಸರಿಗೆ ಬರುತ್ತಿರುತ್ತದೆ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು , ಅಧಿಕಾರ ಇಲ್ಲದೇ ಇದ್ದರೂ ನಾನು ಈ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**Sd/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**